**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 81/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಕಾಂತರಾಜು |
| ತಂದೆಯ ಹೆಸರು | : | ಕುಂಟಶೆಟ್ಟಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಾಮಲಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 19.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನೋಡಿ ಪರಿಚಯವಿರುತ್ತಾರೆ. ಚಾಸಾ-1 ಮತ್ತು ಚಾಸಾ-2 ನಮ್ಮ ಜಮೀನಿನ ಅಕ್ಕ-ಪಕ್ಕದವರು. ಚಾಸಾ-3 ಚಾಸಾ-2 ರವರ ಜಮೀನಿನ ಕೆಲಸಗಳನ್ನು ನೋಡಿಕೊಳ್ಳುತ್ತಾರೆ. ದಿನಾಂಕಃ 19.06.2020 ರಂದು ಬೆಳಿಗ್ಗೆ ಸುಮಾರು 10.30-10.45 ಗಂಟೆ ಸಮಯದಲ್ಲಿ ಆರೋಪಿಗಳು ಚಾಸಾ-1 ರವರ ಜಮೀನಿಗೆ ಹೋಗಿ ಕೂಗಾಡುತ್ತಿದ್ದರು. ಆ ಸಮಯದಲ್ಲಿ ನಾನು ನಮ್ಮ ಜಮೀನಿನಲ್ಲಿದ್ದೆ. ಆಗ ನಾನು ಅಲ್ಲಿಗೆ ಹೋಗಿ ಯಾರು ಕೂಗಾಡುವುದು ಬೇಡ ಎಂದು ಹೇಳಿರುತ್ತೇನೆ. ಆಗ ಚಾಸಾ-1 ನನ್ನ ಬಳಿ ಬಂದು ಆರೋಪಿಗಳು ಕೊಲೆ ಬೆದರಿಕೆ ಹಾಕುತ್ತಿದ್ದಾರೆಂದು ಹೇಳಿರುತ್ತಾರೆ. ಮೊದಲು ಆರೋಪಿಗಳು ಟ್ರಾಕ್ಟರ್ ತೆಗೆದುಕೊಂಡು ಬಂದು ಉಳುಮೆ ಮಾಡಲು ಬಂದಾಗ ಚಾಸಾ-1 ಮತ್ತು ಚಾಸಾ-2

ಅಡ್ಡಗಟ್ಟಿರುತ್ತಾರೆ. ನಂತರ ಎಲ್ಲಾ ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರನ್ನು ಅಡ್ಡಗಟ್ಟಿರುತ್ತಾರೆ. ಆರೋಪಿಗಳೆಲ್ಲರು ಸೇರಿ ಚಾಸಾ-1 ಮತ್ತು ಚಾಸಾ-2 ರವರನ್ನು ಉದ್ದೇಶಿಸಿ ಸೂಳೇಮಕ್ಕಳೇ, ಬೋಳೀಮಕ್ಕಳೇ ನಮ್ಮ ಜಮೀನಿಗೆ ಬರಬೇಡಿ ಎಂದು ಹೇಳಿರುತ್ತಾರೆ. ನಂತರ ಚಾಸಾ-1 ಮತ್ತು ಚಾಸಾ-2 ರವರನ್ನು ಮನೆಗೆ ಕಳುಹಿಸಿ ನಾನು ನಮ್ಮ ಜಮೀನಿಗೆ ಹೋಗಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿ.ಪಿ.-2 ರಲ್ಲಿ ನನ್ನ ಸಹಿ ಇದ್ದು, ಸದರಿ ಸಹಿಯನ್ನು ಚಾಸಾ-1 ರವರ ಜಮೀನಿನಲ್ಲಿ ಹಾಕಿರುತ್ತೇನೆ. ಸಾಕ್ಷಿಯು ನಿ.ಪಿ.-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-2(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>**

1 ಮತ್ತು 3 ನೇ ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರನ್ನು ಆಕ್ರಮವಾಗಿ ಅಡ್ಡಗಟ್ಟಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರಿದು 2 ಮತ್ತು 4 ನೇ ಆರೋಪಿಗಳು ನಂತರ ಬಂದಿರುತ್ತಾರೆಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ</u>**

ಚಾಮಲಾಪುರ ಗ್ರಾಮದಲ್ಲಿರುವ ಸ.ನಂ. 31 ರಲ್ಲಿ 03 ಎಕರೆ ಜಮೀನು ನನ್ನ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿ ನನ್ನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆ ದಿವಸ ನಮ್ಮ

ಜಮೀನಿನಲ್ಲಿ ನಾನೊಬ್ಬನೇ ಕೆಲಸ ಮಾಡುತ್ತಿದ್ದೆ. ಗಲಾಟೆ ನಡೆದಿರುತ್ತದೆಂದು ಹೇಳಿದ ಸಮಯದಲ್ಲಿ ಚಾಸಾ-1 ರಿಂದ ಚಾಸಾ-3 ಮಾತ್ರ ಇದ್ದರು, ಬೇರೆ ಯಾರು ಇರಲಿಲ್ಲ. ಬನವಾಡಿ ಮತ್ತು ಚಾಮಲಾಪುರದ ಸ.ನಂ. ಗಳ ಜಮೀನುಗಳು ಅಕ್ಕ-ಪಕ್ಕದಲ್ಲಿರುತ್ತವೆ. ಚಾಸಾ-1 ಮತ್ತು ಚಾಸಾ-2 ರವರಿಗೆ ಜಮೀನು ಹೇಗೆ ಬಂದಿರುತ್ತದೆಂದು ನಾನು ದಾಖಲೆಗಳನ್ನು ನೋಡಿಲ್ಲ. ಬನವಾಡಿ ಗ್ರಾಮದಲ್ಲಿರುವ ಸ.ನಂ. 16 ರಲ್ಲಿ ಸುಮಾರು 870 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಹಲವಾರು ಜನರು ಸಾಗುವಳಿಗಾಗಿ ಅರ್ಜಿ ಸಲ್ಲಿಸಿ, ನಂತರ ಸಾಗುವಳಿ ಪತ್ರ ಪಡೆದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು ಹೋದಾಗ ಚಾಸಾ-1 ಮತ್ತು ಚಾಸಾ-3 ಜಮೀನಿನಲ್ಲಿರುವ ತೋಟದ ಮನೆಯ ಹತ್ತಿರ ನಿಂತಿದ್ದರು. ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರ ವಿರುದ್ದ ಸಿವಿಲ್ ಪ್ರಕರಣ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರ ವಿರುದ್ಧ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಬನವಾಡಿ ಗ್ರಾಮದಲ್ಲಿರುವ ಸ.ನಂ. 16/ರ ಪಕ್ಕದ ಜಮೀನಿನಲ್ಲಿ ನಮಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಗಳು ಯಾವುದೇ ರೀತಿಯಲ್ಲೂ ಚಾಸಾ-1 ಮತ್ತು ಚಾಸಾ-2 ರವರ ಜಮೀನಿಗೆ ಬಂದು ಆಕ್ರಮ ಪ್ರವೇಶ ಮಾಡಿಲ್ಲ ಮತ್ತು ಯಾವುದೇ ರೀತಿ ಅಡ್ಡಗಟ್ಟಿಲ್ಲ ಹಾಗು ಯಾವುದೇ ಜೀವ ಬೆದರಿಕೆ ಹಾಕಿರುವುದಿಲ್ಲವೆಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿಗಳು ಬೋಳೀಮಕ್ಕಳೇ, ಸೂಳೇಮಕ್ಕಳೇ ಎಂದು ಬೈಯುತ್ತಿದ್ದಾಗ ನಾನು ಸ್ಥಳಕ್ಕೆ

ಹೋಗಿರುತ್ತೇನೆ. ನಾನು ಹೇಳಿರುವಂತೆ ಯಾವುದೇ ಗಲಾಟೆ ನಡೆದಿಲ್ಲ ಮತ್ತು ಚಾಸಾ-1 ಅಥವಾ ಚಾಸಾ-2 ರವರಿಗಾಗಲೀ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ಪೋಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿಲ್ಲ ಮತ್ತು ಮಹಜರ್ ನ್ನು ಠಾಣೆಯಲ್ಲಿಯೇ ಕುಳಿತು ಸೃಷ್ಟಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-1 ಮತ್ತು ಚಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇರುವುದಿಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**